ದಿನಾಂಕ **31.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಕೆ.ಡಿ ರವರಿಂದಃ-**

ನಾನು ಈ ದಾವೆಯಲ್ಲಿ 4 ನೇ ಪ್ರತಿವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಪೂರಕವಾಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿವೆ.

ದಿನಾಂಕ **09.06.2011** ರ ಕ್ರಯಪತ್ರದ ದೃಡೀಕೃತ ನಕಲನ್ನು ನಿ.ಡಿ **1** ಎಂದು, ದಿನಾಂಕ **17.01.2004** ರ ಕ್ರಯಪತ್ರದ ದೃಡೀಕೃತ ನಕಲನ್ನು ನಿ.ಡಿ **2** ಎಂದು, ಪಹಣಿ ಪತ್ರಿಕೆಯನ್ನು ನಿ.ಡಿ **3** ಎಂದು, ಇ-ಖಾತಾಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನಿ.ಡಿ **4** ಮತ್ತು **5** ಎಂದು, ಕರ್ನಾಟಕ ಗ್ರಾಮೀಣ ಬ್ಯಾಂಕಿನ ಶಾಖಾ ವ್ಯವಸ್ಥಾಪಕರು ನೀಡಿದ ಪ್ರಮಾಣಪತ್ರವನ್ನು ನಿ.ಡಿ **6** ಎಂದು, ಉಪವಿಭಾಗಾಧಿಕಾರಿಯವರ ನ್ಯಾಯಾಲಯದ ಆದೇಶ ಪ್ರತಿಯ ದೃಡೀಕೃತ ನಕಲನ್ನು ನಿ.ಡಿ **7** ಎಂದು, ಜಿಲ್ಲಾಧಿಕಾರಿಯವರ ನ್ಯಾಯಾಲಯದ ಆದೇಶ ಪ್ರತಿಯ ದೃಡೀಕೃತ ನಕಲನ್ನು ನಿ.ಡಿ **8** ಎಂದು, ಮರಣ ಪ್ರಮಾಣ

ಪತ್ರವನ್ನು ನಿ.ಡಿ **9** ಎಂದು, ಭೋಗ್ಯ ಪತ್ರವನ್ನು ನಿ.ಡಿ **10** ಎಂದು, ವಿಜಯ ಬ್ಯಾಂಕಿನಲ್ಲಿ ಪಾವತಿಸಿದ ಸಾಲದ ಮರುಸಂದಾಯದ **12** ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿ.ಡಿ **11** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್ 45/2017
ಡಿಡಬ್ಲ್ಯೂ-1